**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ' ಸೋಜಾ, ಇವರ ಶೂನ್ಯ ವೇಳೆ ಪ್ರಸ್ತಾಪಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಉತ್ತರ:**

**ಪ್ರಸ್ತಾಪ:**

ಉನ್ನತ ವಿದ್ಯಾಭ್ಯಾಸಕ್ಕಾಗಿ ನಿರ್ಧರಿತವಾಗಿರುವ ಸಿ.ಇ.ಟಿ (ಸಾಮಾನ್ಯ ಪ್ರವೇಶ ಪರೀಕ್ಷೆ)ಯು ಏಪ್ರಿಲ್ ತಿಂಗಳ 16, 17, 18ನೇ ತಾರೀಕಿನಂದು ನಡೆಸಲು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿರ್ಧರಿಸಿರುತ್ತಾರೆ. ಏಪ್ರಿಲ್ ತಿಂಗಳ 16, 17, 18ನೇ ದಿನಗಳು ಕ್ರೈಸ್ತ ಸಮುದಾಯಕ್ಕೆ ಪವಿತ್ರವಾದ ವಾರವಾಗಿದೆ. '18 ರಂದು ಗುಡ್ ಫ್ರೈಡೆ' ಸರ್ಕಾರಿ ರಜೆಯಿದೆ. ಅನೇಕ ಕ್ರೈಸ್ತ ಸಂಘಗಳು ಮೇಲಿನ ಪರೀಕ್ಷೆಗಳಿಗೆ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. ಕ್ರೈಸ್ತ ಧರ್ಮಕ್ಕೆ ಸೇರಿದ ಸಾವಿರಾರು ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆಯಲ್ಲಿ ಭಾಗವಹಿಸಲು ಈಗಾಗಲೇ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಕ್ರೈಸ್ತ ಸಮುದಾಯದ ಅತ್ಯಂತ ಪ್ರಮುಖವಾದ ಈ ವಾರವನ್ನು "ಹೋಲಿ ವೀಕ್" ಎಂದು ಕರೆಯುತ್ತಾರೆ. ಸೋಮವಾರದಿಂದ ಆಧಿತ್ಯವಾರದವರೆಗೆ ಕ್ರೈಸ್ತರು ಉಪವಾಸ ಮತ್ತು ಚರ್ಚ್‌ಗಳಲ್ಲಿ ಪ್ರಾರ್ಥನೆಗಳಲ್ಲಿ ತೊಡಗಿರುತ್ತಾರೆ. ದಿನಾಂಕ 19ರಂದು (ನಿರ್ಬಂಧಿತ ರಜೆ) ಇದೆ. ದಿನಾಂಕ 20 ರಂದು ಈಸ್ಟರ್ ಹಬ್ಬವನ್ನು ಆಚರಿಸಲಾಗುತ್ತಿದೆ. ಅಲ್ಲದೇ, ಈವರೆಗೆ ನಡೆದ ಎಲ್ಲಾ ಸಿಇಟಿ ಪರೀಕ್ಷೆಗಳು ಶನಿವಾರ & ಆದಿತ್ಯವಾರ ನಡೆಸಲಾಗಿದೆ. ಕ್ರೈಸ್ತ ಸಮುದಾಯದ ಪವಿತ್ರವಾದ ಏಸುವಿನನ್ನು ಶಿಲುಬೆಗೆ ಏರಿಸಿದ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ನೀಡಿದ ರಜೆಯನ್ನು ಗಮನಿಸದೇ ಇರುವುದರಿಂದ, ಕ್ರೈಸ್ತ ಸಮುದಾಯವು ಇದನ್ನು ಪುನರ್ ಪರಿಶೀಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದೆ. ಇದೊಂದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ, ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಕೋರಿರುತ್ತಾರೆ.

**ಉತ್ತರ:**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು CET 2025 ನ್ನು ನಡೆಸಲು ದಿನಾಂಕ:16.01.2025 ರಂದು ಕೆಳಕಂಡಂತೆ ವೇಳಾಪಟ್ಟಿ ಪ್ರಕಟಿಸಿದೆ.

| ದಿನಾಂಕ | ಸಮಯ | ಪತ್ರಿಕೆ | ಅರ್ಜಿ ಸಲ್ಲಿಸಿರುವ ಒಟ್ಟು ವಿದ್ಯಾರ್ಥಿಗಳು |
|---|---|---|---|
| 16.04.2025 | 10.30-11.50 | ಭೌತಶಾಸ್ತ್ರ | 330530 |
| | 02.30-03.50 | ರಸಾಯನಶಾಸ್ತ್ರ | 330530 |
| 17.04.2025 | 10.30-11.50 | ಗಣಿತಶಾಸ್ತ್ರ | 330530 |
| | 02.30-03.50 | ಜೀವಶಾಸ್ತ್ರ | 262589 |
| 18.04.2025 | 10.30-11.50 | ಕನ್ನಡ ಭಾಷೆ | 2537 |

ದಿನಾಂಕ:18.04.2025 ರಂದು ಗುಡ್ ಫ್ರೈಡೆ ದಿನದಂದು ನಿಗಧಿಯಾಗಿರುವ ಕನ್ನಡ ಭಾಷೆ ಪರೀಕ್ಷೆ ಬರೆಯಲು 2537 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಇವರಲ್ಲಿ 115 ವಿದ್ಯಾರ್ಥಿಗಳು ಮಾತ್ರ ಕ್ರೈಸ್ತ ಸಮುದಾಯದವರಿರುತ್ತಾರೆ.

ಆದಾಗ್ಯೂ ಕ್ರೈಸ್ತ ಧರ್ಮದ ವಿದ್ಯಾರ್ಥಿಗಳ ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ, ದಿನಾಂಕ:18.04.2025 ರಂದು ನಿಗದಿಯಾಗಿರುವ ಕನ್ನಡ ಭಾಷೆ ಪರೀಕ್ಷೆಯನ್ನು ದಿನಾಂಕ:15.04.2025ಕ್ಕೆ ನಿಗಧಿಪಡಿಸಲು ಕ್ರಮಕೈಗೊಳ್ಳಲಾಗುವುದು.

ಸಂ: ಇಡಿ 49 ಟಿಇಸಿ 2025

(ಡಾ.ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು